# ಕರ್ನಾಟಕ ಸರ್ಕಾರ

**ಸಂಖ್ಯೆ:** ಇಎನ್ 215 ಎನ್‌ಸಿಇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 26.03.2018

**ಇಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು-01.

**ಇವರಿಗೆ:**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ,
ನಂ. 39, "ಶಾಂತಿ ಗೃಹ", ಪ್ಯಾಲೇಸ್ ರಸ್ತೆ,
ಭಾರತ್ ಸ್ಕೌಟ್ಸ್ ಮತ್ತು ಗೈಡ್ ಬಿಲ್ಡಿಂಗ್,
ಬೆಂಗಳೂರು-560, 001.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಬೆಂಗಳೂರು
ನಂ. 1268(A)
ದಿನಾಂಕ 26/03/18

**ಮಾನ್ಯರೆ,**

**ವಿಷಯ** : IPP-TPS Category ಅಡಿಯಲ್ಲಿ ಸೌರ ಘಟಕಗಳನ್ನು ವೈಯಕ್ತಿಕ/ಸಂಸ್ಥೆಯ /ಸಮಾಜ/ಸಂಸ್ಥೆ/ನೊಂದಾಯಿತ ಕಂಪನಿ(Individual / firm / Society / Institution / Registered Company) ಅವುಗಳ ನೆಟ್‌ವರ್ತ್ ಪರಿಗಣಿಸಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಕ್ರೆಡಲ್ ಸರ್ಕಾರದ ಆದೇಶ ಕೋರಿರುವ ಬಗ್ಗೆ.

**ಉಲ್ಲೇಖ** :
1. ಸರ್ಕಾರದ ಆದೇಶ ಸಂಖ್ಯೆ: ಇಎನ್ 240 ಎನ್‌ಸಿಇ 2011, ದಿನಾಂಕ: 30.05.2011.
2. ಕರ್ನಾಟಕ ಸೌರ ನೀತಿ 2014-21: ಇಎನ್ 49 ವಿಎಸ್‌ಸಿ 2016 ಮತ್ತು ತಿದ್ದುಪಡಿ ಆದೇಶ ದಿನಾಂಕ: 12.01.2017.
3. ತಮ್ಮ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್./07/ಎಸ್‌ಜಿ/ನೆಟ್‌ವರ್ತ್/2018/2475, ದಿನಾಂಕ: 24.03.2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೌರ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಗಾಗಿ ಉಲ್ಲೇಖಿತ (1) ರ ಆದೇಶದನ್ವಯ ನಿಗದಿಪಡಿಸಿರುವ ನೆಟ್‌ವರ್ತ್ ಪ್ರಮಾಣ ಪತ್ರದ ನಮೂನೆಯಲ್ಲಿ ಅಭಿವೃದ್ಧಿದಾರರು ಪ್ರಮಾಣೀಕರಿಸಿ ಸಲ್ಲಿಸಬೇಕಾಗಿರುವುದರಿಂದ ಹಾಗೂ ಉಲ್ಲೇಖಿತ (2) ರ ಸೌರ ನೀತಿಯಲ್ಲಿ ವೈಯಕ್ತಿಕ/ಸಂಸ್ಥೆಯ/ಸಮಾಜ/ಸಂಸ್ಥೆ/ನೊಂದಾಯಿತ ಕಂಪನಿಗಳಿಗೆ (Individual/firm/Society/ Institution/Registered Company) ಸೌರ ಘಟಕಗಳ ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸಲು ಕಲ್ಪಿಸಿರುವ ಅವಕಾಶದನ್ವಯ, ಸದರಿ ನಮೂನೆಯಲ್ಲಿ ವೈಯಕ್ತಿಕ/ಸಂಸ್ಥೆಯ/ಸಮಾಜ/ಸಂಸ್ಥೆ/ ನೊಂದಾಯಿತ ಕಂಪನಿಗಳು (Individual/firm/Society/Institution/Registered Company) ನೆಟ್‌ವರ್ತ್ ಪ್ರಮಾಣ ಪತ್ರವನ್ನು ನೀಡಲು ಸಾಧ್ಯವಾಗದ ಪ್ರಯುಕ್ತ ಕಂಪನಿಗಳ ಜೊತೆಗೆ ಇತರರಿಗೂ ಉತ್ತೇಜನ ನೀಡುವ ನಿಟ್ಟಿನಲ್ಲಿ ವೈಯಕ್ತಿಕ ಮತ್ತು ಪಾಲುದಾರಿಕೆ ಸಂಸ್ಥೆಗಳಿಗೆ (Individual firm/partnership firm/Society) IPP-TPS Category

...2)

ಅಡಿಯಲ್ಲಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿರುವ ನೆಟ್‌ವರ್ತ್ ಮೊತ್ತಕ್ಕೆ ಸಮಾನವಾಗಿ ಅರ್ಜಿದಾರರು ಚಾರ್ಟೆಡ್ ಅಕೌಂಟೆಂಟ್‌ರವರಿಂದ ಪ್ರಮಾಣೀಕರಿಸಿ ಸಲ್ಲಿಸುವ ವೈಯಕ್ತಿಕ ನೆಟ್‌ವರ್ತ್‌ನ್ನು ಪರಿಗಣಿಸಿ IPP-TPS Category ಅಡಿಯಲ್ಲಿ ಸೌರ ಘಟಕವನ್ನು ಹಂಚಿಕೆ ಮಾಡುವ ಕುರಿತು ಸರ್ಕಾರದ ಆದೇಶಕ್ಕಾಗಿ ಉಲ್ಲೇಖಿತ (3) ರ ಪತ್ರದ ಮೂಲಕ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಹಿಂದೆ partnership firm ಗಳಿಗೆ ಹಾಗೂ ಸ್ವತಃ ಅಭಿವೃದ್ಧಿದಾರರೆ ಲೆಕ್ಕಪರಿಶೋಧಕರಿಂದ ನೆಟ್‌ವರ್ತ್ ಕುರಿತು ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಗಣಿಸಿ ಬೇರೆ ಪ್ರಕರಣಗಳಲ್ಲಿ ಹಂಚಿಕೆ ಆದೇಶಗಳನ್ನು ಹೊರಡಿಸಿರುವುದು ಕಂಡುಬಂದಿದೆ.

ಆದುದರಿಂದ, ಸೌರ ನೀತಿಯನ್ವಯ ಕಲ್ಪಿಸಿರುವ ಅವಕಾಶದಂತೆ ಕಂಪನಿಗಳ ಜೊತೆಗೆ ಇತರರಿಗೂ ಉತ್ತೇಜನ ನೀಡುವ ನಿಟ್ಟಿನಲ್ಲಿ ವೈಯಕ್ತಿಕ ಮತ್ತು ಪಾಲುದಾರಿಕೆ ಸಂಸ್ಥೆ (Individual firm/partnership firm/Society) ಗಳಿಗೆ IPP-TPS Category ಅಡಿಯಲ್ಲಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಕಾಲಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿರುವ ನೆಟ್‌ವರ್ತ್ ಮೊತ್ತಕ್ಕೆ ಸಮಾನವಾಗಿ ಅರ್ಜಿದಾರರು ಚಾರ್ಟೆಡ್ ಅಕೌಂಟೆಂಟ್‌ರವರಿಂದ ಪ್ರಮಾಣೀಕರಿಸಿ ಸಲ್ಲಿಸುವ ವೈಯಕ್ತಿಕ ನೆಟ್‌ವರ್ತ್‌ನ್ನು ಪರಿಗಣಿಸಿ IPP-TPS Category ಅಡಿಯಲ್ಲಿ ಸೌರ ಘಟಕವನ್ನು ಹಂಚಿಕೆ ಮಾಡಬಹುದಾಗಿದೆ ಎಂಬುದಾಗಿ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.